**MVC 425-24 PW : 4**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 03.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರ ಪರ ಶ್ರೀ ಎ ಎ ಎಸ್ , ವಕೀಲರಿಂದಃ**

**ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿದ್ದೇನೆ.**

2. ಏಳು ಮೆಡಿಕಲ್ ಬಿಲ್ಲಗಳನ್ನು ಎಲ್ಲಾ ಸೇರಿ ನಿಪಿ.53 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಎದುರುದಾರ ಪರ ಶ್ರೀ A B P, ವಕೀಲರಿಂದಃ**

ನಾನು ಶಿರಸಿಯಲ್ಲಿರುತ್ತೇವೆ. ಮನೆಯಲ್ಲಿ ನಾನು, ನನ್ನ ಗಂಡ ಹಾಗೂ ಮಕ್ಕಳು ಇರುತ್ತೇವೆ. ಶ್ರೀಧರ ರವರು ನಮಗೆ ಸಂಬಂಧಿಕರಾಗಬೇಕು. ನಾನು ಈ ದಿನ ಬಸ್ಸಿನಲ್ಲಿ ಬಂದಿದ್ದೇನೆ. ನಾವು ಆ ದಿನ ಶಿರಸಿಯಿಂದ ಧರ್ಮಸ್ಥಳಕ್ಕೆ ಹೋರಟಿದ್ದೆವು. ನಾನು ಆ ದಿನ ಬೆಃ 8.30 ಗಂಟೆಯಾಗಿತ್ತು, ದಿಃ 13.2.2024 ರಂದು ಅಪಘಾತ ವಾಗಿದೆ. ಶ್ರೀಧರ ರವರು ವಾಹನ ಚಲಾವಣೆ ಮಾಡುತ್ತಿದ್ದರು. ಅಪಘಾತದ ಸ್ಥಳದಲ್ಲಿ ರೋಡ ತಿರುವು ಇತ್ತು ಅಂದರೆ ಸರಿ. ಸ್ವಲ್ಪ ಘಾಟ ಪ್ರದೇಶವಿತ್ತು. ಸದರಿ ತಿರುವಿನಲ್ಲಿ ವಾಹನಗಳು ನಿಧಾನವಾಗಿ ಹೋಗುತ್ತವೆ ಅಂದರೆ ಸರಿ. ತಿರುವಿನಲ್ಲಿ ವಾಹನಗಳು ಮುಂದೆ ಬರುವ ವಾಹನಗಳು ಕಾಣುತ್ತಿರಲಿಲ್ಲ ಅಂದರೆ ಸರಿಯಲ್ಲ. ತಿರುವಿನಲ್ಲಿ ವಾಹನಗಳು ನಿಧಾನವಾಗಿ ಸಾಗುತ್ತವೆ ಅಂದರೆ ಸರಿ. ಶ್ರೀಧರ ರವರು ನಿಯಮ ಪಾಲನೆ ಮಾಡದೆ ಅಡ್ಡಾದಿಡ್ಡಿಯಾಗಿ ವಾಹನ ಚಲಾವಣೆ ಮಾಡಿದ್ದರಿಂದ ಅಪಘಾತ ವಾಗಿದೆ ಅಂದರೆ ಸರಿಯಲ್ಲ. ಅವರ ತಪ್ಪಿನಿಂದ ಅಪಘಾತ ವಾಗಿದೆ ಅಂದರೆ ಸರಿಯಲ್ಲ. ಮೊದಲು ಸಾಗರ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು, ನಂತರ ಅಂಬುಲೆನ್ಸದಲ್ಲಿ ಮ್ಯಾಕ್ಸ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆಗ ಸಮಯ ಎಷ್ಟು ಆಗಿತ್ತು ಎಂದು ಗೊತ್ತಿಲ್ಲ. ಮ್ಯಾಕ್ಸ ಆಸ್ಪತ್ರೆಗೆ ಹೋದ ಬಗ್ಗೆ ದಾಖಲೆ ಹಾಜರಪಡಿಸಿದ್ದೇನೆ. ಹಾಜರಪಡಿಸಿದ ದಾಖಲೆಗಳು ಸುಳ್ಳು ಇವೆ ಅಂದರೆ ಸರಿಯಲ್ಲ. ಈಗಲೂ ಕಾಲು ನೋವು ಇದೆ. ಶಿರಸಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೇನೆ. ತಿಂಗಳಿಗೊಮ್ಮೆ ಚಿಕಿತ್ಸೆಗೆ ಹೋಗುತ್ತಿದ್ದೇನೆ. ಅದರ ದಾಖಲೆಗಳನ್ನು ಹಾಜರಪಡಿಸಿಲ್ಲ. ನಾನು ದೈನಂದಿನ ಕೆಲಸ ಮಾಡಲು ತೊಂದರೆ ಇಲ್ಲ ಅಂದರೆ ಸರಿಯಲ್ಲ. ನಾನು ಟೇಲರಿಂಗ ಕೆಲಸ ಮಾಡುತ್ತೇನೆ. ಇದರ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ನಾನು ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರಪಡಿಸಿಲ್ಲ. ನಾನು ಮೆಡಿಕಲ್ ಬಿಲ್ ಬಗ್ಗೆ ವಿಮೆ ಪರಿಹಾರ ಪಡೆದಿದ್ದೇನೆ ಅಂದರೆ ಸರಿಯಲ್ಲ.

**MVC 424-24** **PW :4**

5 ಲಕ್ಷ ರೂ. ಖರ್ಚು ಮಾಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಸಾಲ ಪಡದಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸಾಲ ಪಡೆದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ಶ್ರೀಧರ ರವರ ಬಳಿ ಚಾಲನಾ ಪ್ರಮಾಣ ಪತ್ರ ಇರಲಿಲ್ಲ ಅಂದರೆ ಸರಿಯಲ್ಲ. ಎದುರಿನ ವಾಹನಕ್ಕೆ ಡಿ ಎಲ್ ಹಾಗೂ ವಿಮೆ ಇರಲಿಲ್ಲ ಅಂದರೆ ಇರಲಿಲ್ಲ ಇಲ್ಲ. ಎದುರಿನ ವಾಹನದ ಚಾಲಕನಿಗೆ ಡಿ ಎಲ್ ಇಲ್ಲದ ಕಾರಣ, ವಿಮೆ ಶರತ್ತು ಉಲ್ಲಂಘನೆಯಾಗಿದ್ದರಿಂದ ಎದುರುದಾರ ನಂಃ 2 ರವರು ಪರಿಹಾರ ಕೊಡಲು ಬಾಧ್ಯಸ್ಥರು ಇರುವುದಿಲ್ಲ ಅಂದರೆ ಸರಿಯಲ್ಲ. ನಾನು ಸುಳ್ಳ ಮೆಡಿಕಲ್ ಬಿಲ್ ಹಾಜರಪಡಿಸಿದ್ದೇನೆ ಅಂದರೆ ಸರಿಯಲ್ಲ. ನನಗೆ ಯಾವುದೇ ಗಾಯವಾಗಿಲ್ಲ ಅಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಆಗಿಲ್ಲ ಅಂದರೆ ಸರಿಯಲ್ಲ. ನಾನು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಯಾವುದೇ ಆದಾಯ ಇಲ್ಲ ಅಂದರೆ ಸರಿ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.